750 ಶ್ರೀ ಶಿವಶಂಕರ ರೆಡ್ಡಿ, ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ್ಯಾಟ್ ಪರೀಕ್ಷೆಯಲ್ಲಿ ಸರ್ವರ್ ತೊಂದರೆಯಿಂದ ಪರೀಕ್ಷೆ ಸ್ಥಗಿತವಾದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಕ್ಯಾಟ್ ಪರೀಕ್ಷೆ ನಡೆಸುವ ವಿಷಯವು ರಾಜ್ಯ ಸರ್ಕಾರದ ವ್ಯಾಪ್ತಿಗೊಳಪಡುವುದಿಲ್ಲ.

ಆ) ಉದ್ಭವಿಸುವುದಿಲ್ಲ

623 ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. (ಗುಬ್ಬಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಗುಬ್ಬಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬಿದರೆ ಮತ್ತು ಸೋಮಲಾಪುರ ಗ್ರಾಮಗಳಿಗೆ ವಿದ್ಯುತ್ ಸ್ಥಾವರಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸ್ಥಾವರಗಳ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ;

ಇ) ಹಾಗಿದಿದ್ದಲ್ಲಿ, ಕಾಮಗಾರಿಯನ್ನು ಪ್ರಾರಂಭಿಸದೇ ಇರಲು ಕಾರಣಗಳೇನು; ವಿವರಗಳನ್ನು ನೀಡುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ), ಆ) ಮತ್ತು ಇ)

ಬಿದರೆ ಮತ್ತು ಸುತ್ತ-ಮುತ್ತಲು ಪ್ರದೇಶಗಳಿಗೆ 15 ಕಿ.ಮೀ. ದೂರದಲ್ಲಿರುವ 110 ಕೆ.ವಿ. ಗುಬ್ಬಿ ವಿದ್ಯುತ್ ಉಪ ಕೇಂದ್ರದಿಂದ ಹಾಗೂ 17 ಕಿ.ಮೀ. ದೂರದಲ್ಲಿರುವ 66 ಕೆ.ವಿ. ಚೇಳೂರು ವಿದ್ಯುತ್ ಉಪ ಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸೋಮಲಾಪುರ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳಿಗೆ 8 ಕಿ.ಮೀ. ದೂರದಲ್ಲಿರುವ 220/110